ಸ್ಪೆನ್ಸರನಿಗೆ ತಾನು ಕುಳಿತಿದ್ದ ಭೂಮಿ ಒಮ್ಮೆಲೆ ಬಾಯ್ಬಿಟ್ಟಾಂತಾಯ್ತು. ಒಂದು ಕ್ಷಣ ಅವನ ಬಾಯಿಂದ ಮಾತೇ ಹೊರಡಲಿಲ್ಲ. ಸಾವರಿಸಿಕೊಂಡು, “ನಿನ್ನ ಕಳಕಳಿಗೆ ಥ್ಯಾಂಕ್ಸ್ ಹನ್ನಾ. ನಾನಿಂದು ನನ್ನ ಹೆಂಡತಿಯ ವಿಚಾರವಾಗಿ ಮಾತನಾಡುವ ಸ್ಥಿತಿಯಲ್ಲಿಲ್ಲ. ನೀನು ಹೊರಡಬಹುದು.” ಎಂದ ಅಧಿಕಾರಯುತವಾಗಿ.

ಹನ್ನಾ ಹೋದನಂತರ ಬಹಳ ಸಮಯ ಅವನು ಹಾಗೇ ಕುಳಿತಿದ್ದ. ಈಗಷ್ಟೇ ಅನುಭವಿಸಿದ್ದ ನಿರಾಳತೆಯ ಜಾಗದಲ್ಲಿ ದುಗುಡ ತುಂಬಿಕೊಳ್ಳತೊಡಗಿತು. ಕಳೆದ ವಾರದ ಘಟನೆಗಳನ್ನು ಮನಸ್ಸು ಮೆಲುಕು ಹಾಕತೊಡಗಿತು. ಹೆಂಡತಿಯ ಕಾಯಿಲೆ, ವೈದ್ಯರ ಚಿಕಿತ್ಸೆ, ತನ್ನ ಅವಿರತ ಸೇವೆ... ಎಲ್ಲೂ ಲೋಪ ದೋಷಗಳು ಅವನಿಗೆ ಕಾಣಿಸಲಿಲ್ಲ. ಅಡುಗೆಯವಳ ಮಾತುಗಳನ್ನು ಮತ್ತೆ ಮನಸ್ಸಿಗೆ ತಂದುಕೊಂಡಾಗ ಅದೇಕೋ ಅವನಿಗೆ ಬೆನ್ನು ಹುರಿಯಲ್ಲಿ ತಣ್ಣನೆಯ ಅನುಭವವಾಯಿತು. ಆದರೆ ಮಾರನೆಯ ಬೆಳಿಗ್ಗೆ ಎದ್ದಾಗ ಅವನು ಉಲ್ಲಸಿತನಾಗಿದ್ದ. ಊಟದ ಕೋಣೆಯಲ್ಲಿ ಬೆಳಗಿನ ಎಳೆ ಬಿಸಿಲು ಕಣ್ಣುಮುಚ್ಚಾಲೆಯಾಡುತ್ತಿತ್ತು. ಗಾಳಿಯಲ್ಲಿ ಕಾಫಿಯ ಮತ್ತು ಬೇಕನಿನ ಪರಿಮಳ ಅವನ ಮೂಗಿನ ಹೊರಳೆಗಳನ್ನು ಹಿರಿದಾಗಿಸಿದವು.

“ಹನ್ನಾ, ಗ್ರೇಟ್!” ಅವನು ಅಭಿನಂದಿಸಿದ. ಅವಳೂ ಸಂತೋಷಗೊಂಡಳು. ತಿಂಡಿ ಮುಗಿಸುತ್ತಿದ್ದಂತೆ ಅವನು ಪೈಪನ್ನು ಉರಿಸಿ ಗಾರ್ಡನಿನೊಳಗೆ ಕಾಲಿರಿಸಿದ. ಅದೀಗ ಸಂಪೂರ್ಣ ಅವನದಾಗಿತ್ತು. ಅದನ್ನು ಅವನಿಗೆ ಹೇಗೆ ಬೇಕೋ ಹಾಗೆ ಬದಲಾಯಿಸಲು ಸ್ವಾತಂತ್ರ್ಯ ಸಿಕ್ಕಿತ್ತು.

ಊಟದ ನಂತರ ಸ್ಪೆನ್ಸರ್ ಮನೆಯೊಳಗೇ ಒಂದು ಸುತ್ತು ತೆಗೆಯಲು ನಿರ್ಧರಿಸಿದ. ಹೆಂಡತಿಯ ರೂಮಿನ ಕಿಟಕಿಗಳು ತೆರೆದಿದ್ದು ಹಿತವಾದ ಗಾಳಿ ಬೀಸುತ್ತಿತ್ತು. ಎಲ್ಲವೂ ಠಾಕು ಠೀಕಾಗಿತ್ತು. ಅವನು ಮೇಜಿನ ಒಂದೊಂದೇ ಡ್ರಾವರನ್ನು ಎಳೆದು ಪರಿಶೀಲಿಸತೊಡಗಿದ. ಕೆಲವು ಅನಗತ್ಯ ವಸ್ತುಗಳನ್ನು ಬಿಟ್ಟರೆ ಅಲ್ಲೇನೂ ಬೆಲೆಬಾಳುವಂತದ್ದು ಅವನಿಗೆ ಕಾಣಿಸಲಿಲ್ಲ. ವಿಚಲಿತನಾಗಿ ಹನ್ನಾಳನ್ನು ಕೂಗಿ ಕರೆದ.

“ಹನ್ನಾ, ಮೇಡಮ್ ತಮ್ಮ ವಸ್ತುಗಳನ್ನೆಲ್ಲಾ ಎಲ್ಲಿಟ್ಟಿದ್ದಾರೆ?”

“ವಸ್ತುಗಳೆಂದರೆ?”

“ಚಿನ್ನ, ವಜ್ರಾಭರಣಗಳು?”

“ಓಹ್!... ಅವನ್ನೆಲ್ಲಾ ಮೇಡಮ್ ನನಗೆ ಕಾಣಿಕೆಯನ್ನಾಗಿ ಕೊಟ್ಟಿದ್ದಾರೆ.”

ಸ್ಪೆನ್ಸರನ ಹೃದಯ ಬಡಿತ ಒಮ್ಮೆಲೇ ಏರುಪೇರಾದಂತಾಯಿತು. “ಯಾವಾಗ?” ಅವನು ತೊದಲಿದ.

“ಅಜೀರ್ಣತೆಯಿಂದ ಹಾಸಿಗೆ ಹಿಡಿದು ಪ್ರಾಣ ಬಿಡುವ ತುಸು ಮೊದಲು ಸರ್...” ಅವಳು ಯಾವುದೇ ಉದ್ವೇಗವಿಲ್ಲದೆ ಹೇಳಿದಳು.

ಅವನು ಹಿಂದಿರುಗಿ ನೋಡಿದ. ಅವನ ಮುಖಚರ್ಯೆ ವಿವರ್ಣವಾಗಿತ್ತು. ಕಷ್ಟಪಟ್ಟು ಡ್ರಾವರುಗಳನ್ನು ಮುಚ್ಚಿ, “ಹಾಗಾದರೆ ಪರವಾಗಿಲ್ಲ. ನಾನೆಲ್ಲೋ ಆ ಹುಡುಗಿ ಮಿಲ್ಲಿ ಏನಾದ್ರೂ...” ಎಂದ.

“ಮಿಲ್ಲಿ ತುಂಬಾ ಒಳ್ಳೆ ಹುಡುಗಿ ಸರ್. ನಮ್ಮ ನಿಮ್ಮಷ್ಟೇ ಪ್ರಾಮಾಣಿಕಳು. ಬೇರೆ ಏನಾದ್ರೂ ಸರ್?...”

ಹನ್ನಾ ಬಾಗಿಲನ್ನು ಮುಚ್ಚಿ ಹೊರ ಹೋದಳು. ಸ್ಪೆನ್ಸರ್ ಮೇಜಿನ ಅಂಚನ್ನು ಹಿಡಿದು ಅಲ್ಲೇ ಕಲ್ಲಿನಂತಾದ.

★★★